ಬೆಳಗಾವಿ ಈ ರೀತಿ ಎಲ್ಲೆಲ್ಲಿ ಇಂಡಸ್ಟ್ರೀಯಲ್ ಅಸೋಸಿಯೇಷನ್‌ಗಳನ್ನು ಮಾಡಿಕೊಂಡು, ಈ ಕೈಗಾರಿಕಾ ಎಸ್ಟೇಟ್‌ಗಳಲ್ಲಿ ಇರತಕ್ಕಂಥ ಕೈಗಾರಿಕೆದಾರರ ಸಂಘಗಳನ್ನು ಮಾಡಿಕೊಂಡಿದ್ದಾರೆ. ಅವರನ್ನೆಲ್ಲಾ ಪ್ರತ್ಯೇಕವಾಗಿ ಕರೆದು ಅವರನ್ನೂ ಸಹಿತ ಆ ಬೋರ್ಡ್‌ನಲ್ಲಿ ನಾನು ಸೇರಿಸುತ್ತೇನೆ, ಅವರೂ ಕೂಡ ತಮ್ಮ ಸಮಸ್ಯೆಗಳನ್ನು ಹೇಳಬಹುದು. ಇದೂ ಅಲ್ಲದೆ ನಾನು ಈ ತಿಂಗಳು ಮೂವತ್ತನೇ ತಾರೀಖಿಗೆ ನಿಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಬರುವುದಿತ್ತು. ನಿಮ್ಮ ವಿಮಾನ ನಿಲ್ದಾಣದ ವಿಸ್ತರಣೆ ಕೆಲಸಕ್ಕೋಸ್ಕರ ಬರಬೇಕಾದದ್ದು : ಅದು ಮುಂದೆ ಹೋಗಿದೆ. ಆಗಸ್ಟ್ ಎರಡನೇ ವಾರದಲ್ಲಿ ನಾನು ಬರುತ್ತೇನೆ, ಹಾಗೆ ಬಂದಂಥ ಸಂದರ್ಭದಲ್ಲಿ ಅಲ್ಲಿಗೂ ಸಹಿತ ನಾನು ಭೇಟಿ ಕೊಡುತ್ತೇನೆ. ಮತ್ತು ಅದನ್ನು ಸರಿಪಡಿಸತಕ್ಕಂಥ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೇ, ರೋಗಗ್ರಸ್ಥ ಆಗಿರತಕ್ಕಂಥ ಸಣ್ಣ ಕೈಗಾರಿಕೆಗಳಿಗೆ ಯಾವುದೇ ರೀತಿಯಲ್ಲಿ ಸೆಟಲ್‌ಮೆಂಟ್ ಆಗುವಂಥಹ ರೀತಿಯಲ್ಲಿ ಆ ನಿಟ್ಟಿನಲ್ಲಿ ಅಕಸ್ಮಾತ್ ಮಾರಾಟ ಮಾಡಬೇಕು ಅಂತ ಇದ್ದರೆ ಒನ್ ಟೈಮ್ ಸೆಟಲ್‌ಮೆಂಟ್‌ಗೆ ಸುಮಾರು ಇಪ್ಪತ್ತು ಬೇರೆ ಬೇರೆ ಸಂಸ್ಥೆಗಳಿಂದ ಕ್ಲಿಯರೆನ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಏಕ ಗವಾಕ್ಷಿ ಇರುವಂತಹ ವ್ಯವಸ್ಥೆಯಲ್ಲಿ ತೆಗೆದುಕೊಳ್ಳುವುದಕ್ಕೆ ಏನಾದರೂ ಮಾಡುವುದಕ್ಕೆ ಸಾಧ್ಯ ಇದೆಯಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ, ನಮ್ಮ ಬೋರ್ಡಿನಲ್ಲಿ ಈ ಸಲಹೆಯನ್ನು ಸಹಿತ ನಾನು ಪರಿಶೀಲಿಸುತ್ತೇನೆ.

ಮೈಸೂರು ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆ

55(359) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ಜಿಲ್ಲೆಯಾದ್ಯಂತ ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ಉದ್ದೇಶದ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಮತಿ ನೀಡಲಾಗಿದೆ ;

ಆ) ಸದರಿ ಕೈಗಾರಿಕೆಗಳಲ್ಲಿನ ಉದ್ಯೋಗಾವಕಾಶಗಳನ್ನು ; (ವಿವರವನ್ನು ಒದಗಿಸುವುದು) ;

ಇ) ಮೈಸೂರು ಜಿಲ್ಲೆಯಾದ್ಯಂತ ಕೈಗಾರಿಕೆಗಳ ಸ್ಥಾಪನೆ/ಅಭಿವೃದ್ಧಿಗೆ ಸರ್ಕಾರದಿಂದ ಯಾವ ರೀತಿಯ ಸೌಲಭ್ಯ/ಉತ್ತೇಜನ ನೀಡಲಾಗುತ್ತಿದೆ (ವಿವರ ಒದಗಿಸುವುದು) ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಮೈಸೂರು ಜಿಲ್ಲೆಯಲ್ಲಿ 5 ವರ್ಷಗಳಿಂದ 42 ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಯೋಜನೆಗಳು ಮಂಜೂರಾತಿ ನೀಡಿವೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿವೆ.

1.	ಮೈಸೂರು	:	29
2.	ಹುಣಸೂರು	:	2
3.	ನಂಜನಗೂಡು	:	8
4.	ಟಿ. ನರಸೀಪುರ	:	1
5.	ಹೆಡ್. ಡಿ. ಕೋಟೆ	:	2

ಪ್ರಸ್ತಾಪಿತ ಮುಖ್ಯ ಯೋಜನೆಗಳ ಚಟುವಟಿಕೆಗಳೆಂದರೆ : ಆಟೋಮೊಬೈಲ್ (2,3 ಮತ್ತು 4 ಚಕ್ರಗಳ), ಸಾಫ್ಟ್ ವೇರ್ ಡೆವಲಪ್ಮೆಂಟ್, ಮೂಲಭೂತ ಸೌಕರ್ಯಗಳು, ವಿದ್ಯುತ್, ಸಿದ್ಧ ಉಡುಪುಗಳು, ಪ್ರಿಂಟೆಡ್ ಸರ್ಕ್ಯೂಟ್ ಬೋರ್ಡ್, ಮೋಟಾರ್ ವಾಹನಗಳ ಬಿಡಿ ಭಾಗಗಳು ಇತ್ಯಾದಿ.

ಆ) ಈ ಯೋಜನೆಗಳಿಂದ ಲಭ್ಯವಾಗುವ ಉದ್ಯೋಗಾವಕಾಶ 18312

ಇ) ಕೈಗಾರಿಕಾ ನೀತಿ 2001–06 ರಂತೆ ರಿಯಾಯಿತಿ ಮತ್ತು ಸವಲತ್ತುಗಳನ್ನು ಹೊಸದಾಗಿ ಸ್ಥಾಪಿಸಲ್ಪಡುವ ಕೈಗಾರಿಕೆಗಳಿಗೆ ನೀಡಲಾಗುತ್ತದೆ. ಮುಖ್ಯವಾಗಿ ಬಂಡವಾಳ ಮತ್ತು ಕಚ್ಚಾಮಾಲಿನ ಮೇಲಿನ ಪ್ರವೇಶ ತೆರಿಗೆ ವಿನಾಯಿತಿ ದೊರೆಯಲಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಸಭಾಧ್ಯಕ್ಷರೇ, ಮೈಸೂರು ಸಾಂಸ್ಕೃತಿಕ ರಾಜಧಾನಿ. ಈ ಮೈಸೂರಿನಲ್ಲಿ ಸುಮಾರು ಇನ್ನೂರಕ್ಕೂ ಹೆಚ್ಚು ಕೈಗಾರಿಕೆಗಳು ಮುಚ್ಚಿವೆ. ಸಾವಿರಾರು ಜನ ಉದ್ಯೋಗವನ್ನು ಕಳೆದುಕೊಂಡು ಹೊಟ್ಟೆ ಮೇಲೆ ತಣ್ಣೀರು ಪಟ್ಟಿಯನ್ನು ಹಾಕಿಕೊಂಡಿದ್ದಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಹೊಸ ಕೈಗಾರಿಕೆಗಳಿಗೆ ಅನುಮತಿಯನ್ನು ನೀಡಿ ಅದರಿಂದ ಈಗ ಏನು ಕಾರ್ಖಾನೆಗಳು ಮುಚ್ಚಿಹೋಗಿವೆ. ಈ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕಂಥವರಿಗೆ ಅವಕಾಶ ಕೊಡದೇನೇ ಹಳೆಯ ಕೈಗಾರಿಕೆಗಳನ್ನು ತೆಗೆಸುವಂತಹ ಪ್ರಯತ್ನ ಮಾಡದೆಯೇ ಹೊಸ ಕೈಗಾರಿಕೆಗಳನ್ನು ನೀಡುವುದರಿಂದ ಏನು ಪ್ರಯೋಜನ ? ಇದು ಒಂದು, ಎರಡನೇಯದು ಏನೆಂದರೆ, ಇ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಆಸ್ಪದ ಇಲ್ಲ. ಇವತ್ತು ಕನ್ನಡಿಗರು ಕಂಗಾಲಾಗಿದ್ದಾರೆ. ಹೊರರಾಜ್ಯಗಳಿಂದ ಬಂದಿರತಕ್ಕಂಥವರಿಗೆ, ತಮಿಳುನಾಡಿನಿಂದ ಬಂದಿರತಕ್ಕಂಥವರಿಗೆ ಕೆಲಸ ಸಿಗುತ್ತದೆ. ಆದರೆ ಇಲ್ಲಿ ಕೆಲಸ ಕಳೆದುಕೊಂಡು, ಸೂರು ಕಳೆದುಕೊಂಡಂಥವರಿಗೆ ಕೆಲಸ ಇಲ್ಲ. ಇಂತಹ ಒಂದು ಪರಿಸ್ಥಿತಿಯ ? ಮೈಸೂರು ನಗ ಇದು ರಾಜ್ಯ ಮಹಾರಾಜರು ಆಳಿದಂಥ ನಗರ. ಈ ನಗರವನ್ನು ಕನ್ನಡ ಕವಿಗಳು ಹೊಗಳಿದ್ದಾರು. 'ಶ್ರೀಗಂಧ ಕಂಪಿನ ಊರು ಮೈಸೂರು, ಮಲ್ಲಿಗೆ ಇಂಪಿನ ಊರು ಮೈಸೂರು' ಎಂದು ಹೊಗಳಿದಂಥ ಊರು ಮೈಸೂರಾಗಿದೆ.

ಅಧ್ಯಕ್ಷರು : ಗೌಡರೇ, ಪ್ರಶ್ನೆ ಕೇಳಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ತಾವು ದಯವಿಟ್ಟು ನನಗೆ ಅವಕಾಶ ಕೊಡಬೇಕು, ಮಾನ್ಯ ಸಿಂಧ್ಯಾರವರು ಮತ್ತು ನಾನೂ ಕೂಡ ಇಪ್ಪತ್ತು ವರ್ಷದ ಸ್ನೇಹಿತರು. ನನ್ನನ್ನು ಮೈಸೂರಿನ ಮೇಯರ್ ಮಾಡಿದವರೇ ಅವರು – ಅವರನ್ನು ಕೇಳುವುದಕ್ಕೆ ನನಗೆ ಅಧಿಕಾರವಿದೆ ನಾನು ಮಹಾಪೌರ ಆಗಿರಬೇಕಾದರೆ ಯಾವುದೋ ಒಂದು ಜಗಳದಲ್ಲಿ ಸಿಗರೇಟನ್ನು ನನ್ನ ಬಾಯಿಗಿಟ್ಟು ಬೆಂಕಿಹಚ್ಚಿ ಸಮಾಧಾನ ಮಾಡಿಕೋ ಎಂದು ಅವರು ಹೇಳಿದ್ದರು. ಆದ್ದರಿಂದ ನನಗೆ ಕೋಪ ಇಲ್ಲ. 'ಉತ್ತಮನ ಕೋಪ ಒಂದು ಗಳಿಗೆ. ಮಧ್ಯಮನ ಕೋಪ ಎರಡು ಗಳಿಗೆ, ಪಾಪಿಷ್ಟನ ಕೋಪ ಸಾಯುವ ತನಕ' ಅಂತ ಹೇಳುತ್ತಾರೆ. ನಾನು ಕೊನೆಯ ಎರಡಲ್ಲ, ಮೊದಲನೆಯದು ಮಾತ್ರ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸಿಂಧ್ಯ ಅವರಿಗೆ ಮುಚ್ಚಿರತಕ್ಕಂಥ ಕಾರ್ಖಾನೆಗಳನ್ನು ತೆರೆಸಬೇಕೆಂದು ಹೇಳುತ್ತಿದ್ದೇನೆ, ಅದರಲ್ಲೂ ನಂಜನಗೂಡಿನ ಕಾರ್ಖಾನೆಗೆ ಎರಡನೇ ಹಂತದ ವಿಸ್ತರಣೆಗೆ ಜಾಗ ಕೊಡುವುದಿಲ್ಲ ಎಂದು ವಂಚನೆ ಮಾಡಿದ್ದಾರೆ. ಇದೆಲ್ಲಾ ಏಕೆ ಮಾಡಿದ್ದೀರಿ? ಕನ್ನಡಿಗರಿಗೆ ಏಕೆ ಅವಕಾಶ ಸಿಕ್ಕಿಲ್ಲ ? ಮುಚ್ಚಿರತಕ್ಕಂಥ ಕಾರ್ಖಾನೆಗಳನ್ನು ತೆರೆಸುತ್ತೀರಾ ? ಈಗಾಗಲೇ ಉದ್ಯೋಗ ಕಳೆದು ಕೊಂಡಿರತಕ್ಕಂಥವರಿಗೆ ಉದ್ಯೋಗ ಕೊಡಿಸುತ್ತೀರಾ ಎಂಬುದನ್ನು ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಮಾನ್ಯ ಶಂಕರಲಿಂಗೇಗೌಡರ ಪ್ರಶ್ನೆ ಲಿಖಿತ ರೂಪದಲ್ಲಿದ್ದು ಇದು ಮೈಸೂರು ಜಿಲ್ಲೆಗೆ ಮಾತ್ರ ಸೀಮಿತವಾಗಿರತಕ್ಕಂಥ ಒಂದು ಪ್ರಶ್ನೆ. ಈಗ ಹೊಸ ಕಾರ್ಖಾನೆಗಳನ್ನು ಪ್ರಾರಂಭ ಮಾಡುತ್ತಿದ್ದೀರಿ, ಹಳೆಯ ಕಾರ್ಖಾನೆಗಳನ್ನು ಮುಚ್ಚಿಹಾಕಿದ್ದಾರೆ. ಅಲ್ಲಿರತಕ್ಕಂಥವರಿಗೆ ಕೆಲಸ ಕೊಡದೆ ಹೊಸ ಕಾರ್ಖಾನೆಗಳನ್ನು ಏಕೆ ಪ್ರಾರಂಭ ಮಾಡುತ್ತಿದ್ದೀರಿ ಎನ್ನತಕ್ಕಂಥ ವಾದ ಏನಿದೆ. ಇದು ವಾದ ಮಾಡಲಿಕ್ಕೆ ಚೆನ್ನಾಗಿದೆ. ಆದರೆ ಹೊಸ ಕಾರ್ಖಾನೆಗಳು ಬರದೇ ಹೋದರೆ. ಉದ್ಯೋಗದ ಅವಕಾಶಗಳು ಕಡಿಮೆಯಾಗುತ್ತವೆ. ತಮಗೆ ಗೊತ್ತಿರುವ ಹಾಗೆ ಕೆಲವು ಸಂದರ್ಭದಲ್ಲಿ ನನಗೆ ಹೊಟ್ಟೆ ಉರಿಯುತ್ತದೆ. ಮೈಸೂರು, ತುಮಕೂರಿನಲ್ಲಿ ಸುಮಾರು ಹದಿನೈದು–ಇಪ್ಪತ್ತು ವರ್ಷಗಳ ಹಿಂದೆ ಬೆಳೆಯುತ್ತಿದ್ದ ಕೈಗಾರಿಕೆಗಳೆಲ್ಲಾ ಈಗ ನಾಶವಾಗುತ್ತಾ ಇರತಕ್ಕಂಥಾದ್ದನ್ನು ನೋಡಿದಾಗ ನಿಜವಾಗಿಯೂ ಸಹಿತ ಇದು ಕಣ್ಣೀರಿನ ಕಥೆಯೇ ಸರಿ. ನಾನು ಇವುಗಳನ್ನು ಪುನೇಶ್ಚೇತನ ಮಾಡುವುದಕ್ಕೆ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ. ನಾನು ಮೊನ್ನೆ ಮೈಸೂರಿಗೆ ಬಂದಿದ್ದಾಗ ಅಲ್ಲಿ ಎಲ್ಲಾ ಸಂಗ ಸಂಸ್ಥೆಯವರು ಸಹಿತ ಬಂದಿದ್ದರು. ನಾನು ತಮಗೆ ತಿಳಿಸಲಿಕ್ಕೆ ಆಗಲಿಲ್ಲ. ಅದು ಒಂದು ಖಾಸಗಿ ಕಾರ್ಯಕ್ರಮಕ್ಕೆ ನಾನು ಬಂದಿದ್ದೆ. ಅದರ ಜೊತೆಯಲ್ಲಿ ಅಲ್ಲಿ ಹೊಸ ಕಾರ್ಖಾನೆಗಳನ್ನು ತರಬೇಕು ಎನ್ನತಕ್ಕದ್ದೂ ಕೂಡ ನನ್ನ ಗಮನದಲ್ಲಿದೆ. ಒಂದು ಇನ್ವೆಸ್ಟರ್ಸ ಮೀಟ್‌ನ್ನು ಮೈಸೂರಿನಲ್ಲಿ ಮಾಡಬೇಕು ಎನ್ನತಕ್ಕಂಥ ಉದ್ದೇಶವನ್ನು ನಾನು ಇಟ್ಟುಕೊಂಡಿದ್ದೇನೆ. ಬರತಕ್ಕಂಥ ಮೂರು ನಾಲ್ಕು ತಿಂಗಳಲ್ಲಿ ಆಗಸ್ಟ್‌ನಲ್ಲಿ ಹಾಸನದಲ್ಲಿ, ಸೆಪ್ಟೆಂಬರ್‌ನಲ್ಲಿ ದಸರಾ ಹಬ್ಬದ ಸಂದರ್ಭದಲ್ಲಿ ಮೈಸೂರಿನಲ್ಲಿ ಇದನ್ನು ಮಾಡಬೇಕೆಂದು ಇದ್ದೇವೆ. ಹುಬ್ಬಳ್ಳಿ, ಗುಲ್ಬರ್ಗಾದಲ್ಲಿ ಕೂಡ ಇದನ್ನು ಮಾಡಬೇಕೆಂದು ಇದ್ದೇವೆ. ಇದರಿಂದ ಹೊಸ ಕಾರ್ಖಾನೆಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಅವನ್ನು ಪ್ರಾರಂಭ ಮಾಡುವಾಗ ಸ್ಕಿಲ್ಡ್ ವರ್ಕರ್ಸ್ ಯಾರು ಹಳೆಯ ಕಾರ್ಖಾನೆಗಳಲ್ಲಿ ಇದ್ದವರು ಇವತ್ತು ಕೆಲಸಗಳನ್ನು ಕಳೆದುಕೊಂಡಿದ್ದಾರೆ. ಅವರಿಗೆ ಅವಕಾಶವನ್ನು ಕೊಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಇನ್ನು ಮೂಲಭೂತವಾಗಿ ಬಹಳ ಮಹತ್ವವಾಗಿರತಕ್ಕಂಥ ಪ್ರಶ್ನೆಯನ್ನು ತಾವು ಕೇಳಿದ್ದೀರಿ. ಕನ್ನಡಿಗರಿಗೆ ಉದ್ಯೋಗಾವಕಾಶಗಳನ್ನು ಕೊಡತಕ್ಕಂಥ ವಿಚಾರದಲ್ಲಿ ನಮ್ಮ ನಾಯಕರಾಗಿರತಕ್ಕಂಥ ವಾಟಾಳ್ ನಾಗರಾಜ್ ಅವರು ಬಹಳ ದೊಡ್ಡ ಹೋರಾಟವನ್ನು ಈ ವಿಚಾರದಲ್ಲಿ ಮಾಡಿದ್ದಾರೆ. ನಮಗೂ ಸಹಿತ ಕೆಲವು ಸಂದರ್ಭಗಳಲ್ಲಿ ಬಹಳ ನೋವು, ಅನ್ನಿಸುತ್ತದೆ. ಸ್ಥಳೀಯವರಿಗೆ ಉದ್ಯೋಗಾವಕಾಶವನ್ನು ಕೊಟ್ಟಿಲ್ಲ ಅಂತ ಹೇಳಿ. ಅದಕ್ಕೋಸ್ಕರ ನಾನು ಯಾವುದೇ ಜಿಲ್ಲೆಯಲ್ಲಿ ಪ್ರವಾಸ ಮಾಡಿದರೂ, ಮೊದಲಬಾರಿಗೆ ಕೈಗಾರಿಕೆ ಇಲಾಖೆಯಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶವನ್ನು, ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ಕೊಡಬೇಕು ಎನ್ನುವುದರ ಬಗ್ಗೆ ಈಗಾಗಲೇ ಸರ್ಕಾರಿ ಆಜ್ಞೆಯಾಗಿದೆ. ಇದರ ಬಗ್ಗೆ ಸರೋಜಿನಿ ಮಹಿಷಿ ಅವರ ವರದಿ ಇದೆ. ಆದರೆ ಅದನ್ನು ಎಷ್ಟರಮಟ್ಟಿಗೆ ಇಂಪ್ಲಿಮೆಂಟ್ ಮಾಡಿದ್ದಾರೆ ಎಂದು ತಿಳಿಸುಕೊಳ್ಳುವುದಕ್ಕೆ ನಾನು ಪ್ರತಿಯೊಂದು ಜಿಲ್ಲೆಯಲ್ಲಿ ಸಹಿತ ರಿವ್ಯೂ ಮಾಡುತ್ತೇನೆ. ರಾಜ್ಯದಲ್ಲೂ ಸಹಿತ ರಿವ್ಯೂ ಮಾಡುತ್ತೇನೆ. ಯಾವುದೇ ಕಾರಣಕ್ಕೂ ಸಹಿತ ಇದನ್ನು ಅನುಷ್ಠಾನಗೊಳಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅನುಷ್ಠಾನಗೊಳಿಸಬೇಕಾದರೆ, ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಇದನ್ನು ಜಾರಿಗೆ ತರಬೇಕೆಂದು ಕೊಟ್ಟಿರತಕ್ಕಂಥ ಸರೋಜಿನಿ ಮಹಿಷಿಯವರ ವರದಿ ಇದು. ಅದು ಈಗ ಮೂಲೆ ಗುಂಪಾಗಿದೆ. ಕಾಲುಕಸವಾಗಿಬಿದ್ದು ಹೋಗಿದೆ. ಅದು ಎಲ್ಲಿದೆ ಅಂತ ನೀವು ಹುಡುಕಿಸಬೇಕಾದರೆ ಈಗ ಒಂದು ಆಯೋಗವನ್ನೇ ರಚನೆ ಮಾಡಬೇಕು. ಇದು ಎಲ್ಲಿದೆ. ಯಾವ ಮೂಲೆಯಲ್ಲಿದೆ. ಯಾವ ಇಲಾಖೆಯಲ್ಲಿದೆ. ಎಲ್ಲಿ ಕುಳಿತಿದೆ ಎಂದು ನೋಡಬೇಕಾಗುತ್ತದೆ. ಪ್ರಾಮಾಣಿಕವಾಗಿ ನಾನು ತಮಗೆ ಹೇಳುತ್ತೇನೆ. ಸರೋಜಿನಿ ಮಹಿಷಿ ವರದಿಯನ್ನು ಮೂಲವಾಗಿ ಈಗಾಗಲೇ ವಿಕಾರ ಮಾಡಿಬಿಟ್ಟಿದ್ದೀರಿ. ಅವರು ಮೂಲಭೂತವಾದ ವರದಿಯನ್ನು, ಅತ್ಯಂತ ಪರಿಣಾಮಕಾರಿಯಾದ, ಪ್ರಾಮಾಣಿಕವಾದ ವರದಿಯನ್ನು ಅವರು ಕೊಟ್ಟರು. ಮಣ್ಣಿನ ಮಕ್ಕಳಿಗೆ ಆದ್ಯತೆ, ಮಣ್ಣಿನ ಮಕ್ಕಳಿಗೆ ಕೆಲಸ ಅಂತ ಅದರಲ್ಲಿ ಇತ್ತು. ಆದರೆ ಬರುಬರುತ್ತಾ ಅದಕ್ಕೆ ಉಪಸಮಿತಿಗಳನ್ನು ಮಾಡಿಮಾಡಿ ಅಲ್ಲಿರತಕ್ಕಂಥ ಜೀವವನ್ನೆಲ್ಲಾ ತೆಗೆದು, ಸ್ವಾರಸ್ಯವನ್ನು ಕಿತ್ತುಹಾಕಿ ಅದು ಕೊನೆಗೆ ಒಂದು ರೀತಿಯಲ್ಲಿ ಹೆಳವಾಗಿ ಕೂತಿದೆ. ಈಗ ಅದು ಎಲ್ಲಿದೆ ಅಂತ ತಾವು ಹುಡುಕಬೇಕಾಗಿದೆ. ಆದ್ದರಿಂದ ಸರೋಜಿನಿ ಮಹಿಷಿ ವರದಿಯನ್ನು ನೀವು ಜಾರಿಗೆ ಕೊಟ್ಟಿಲ್ಲವೆಂದರೆ ಕರ್ನಾಟಕ ಬೇರೆಯವರ ಪಾಲಾಗುತ್ತದೆ. ತಮಿಳುನಾಡಿನವರ ಪಾಲಾಗುತ್ತದೆ. ಆಂಧ್ರದವರ ಪಾಲಾಗುತ್ತದೆ. ಕೇರಳದ ಪಾಲಾಗುತ್ತದೆ. ಇದು ಸ್ಪಷ್ಟ. ಅದಕ್ಕೆ ಏನು ಹೇಳುತ್ತೀರಿ ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಸರೋಜಿನಿ ಮಹಿಷಿ ವರದಿಯನ್ನು ಹುಡುಕಲಿಕ್ಕೆ ಆಯೋಗವನ್ನು ರಚನೆ ಮಾಡಬೇಕೆಂದು ಸಲಹೆಯನ್ನು ಕೊಟ್ಟಿದ್ದಾರೆ. ಆ ಆಯೋಗದ ಅಧ್ಯಕ್ಷರನ್ನಾಗಿ ಇವರನ್ನೇ ಮಾಡಿದರೆ ಸರಿಹೋಗುತ್ತದೆ. ಬೇರೆ ಯಾರನ್ನು ಮಾಡಿದರೂ ಪ್ರಯೋಜನ ಇಲ್ಲ. ಹಾಗಾಗಿ ವಾಟಾಳ್ ನಾಗರಾಜ್ ಅವರನ್ನೇ ಅದರ ಅಧ್ಯಕ್ಷರನ್ನಾಗಿ ಮಾಡಿಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇಲ್ಲ, ಅಧ್ಯಕ್ಷರೇ, ನಾನು ಕೈಗಾರಿಕೆ ಮಂತ್ರಿಯಾದ ಮೇಲೆ ಈಗಾಗಲೇ ಅದನ್ನು ಹುಡುಕಿದ್ದೇನೆ. ಖಂಡಿತವಾಗಿ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ, ಕೆಲಸ ಆದಮೇಲೆ ಮಾನ್ಯ ನಾಗರಾಜ್ ಅವರು ನನ್ನ ಕೆಲಸವನ್ನು ಮೆಚ್ಚುತ್ತಾರೆ ಎಂದು ನನಗೆ ವಿಶ್ವಾಸ ಇದೆ.

ಶ್ರೀ ವಾಟಾಳ್ ನಾಗರಾಜ್ : ವರದಿ ಎಲ್ಲಿದೆ ಅಂತ ಅಷ್ಟು ಹೇಳಿ ಸ್ವಾಮಿ. ಹೊಸ ಹೊಸ ಕಾರ್ಖಾನೆಗಳು ಬರುತ್ತವೆ. ಅಲ್ಲಿ ಕೆಲಸ ಯಾರಿಗೆ ಕೊಡಬೇಕು ಅಂತ ನೀತಿ ಸರ್ಕಾರದ್ದು ಆಗಬೇಕು.

ಸರ್ಕಾರದಿಂದ ಕನ್ನಡಿಗರಿಗೇ ಉದ್ಯೋಗ ಎಂಬ ನೀತಿಯಾಗಬೇಕು. ತಮಿಳುನಾಡು ಏನಾಗಿದೆ. ಕರುಣಾನಿಧಿಯವರು. ಮುಖ್ಯಮಂತ್ರಿಯಾಗಿದ್ದಾಗ ಯಾವುದೇ ಕಾರ್ಖಾನೆಗಳು ತಮಿಳುನಾಡಿಗೆ ಬಂದಾಗ ನೂರಕ್ಕೆ ತೊಂಬತ್ತೂಂಭತ್ತು ಭಾಗ ಮಣ್ಣಿನ ಮಕ್ಕಳಿಗೇ ಕೊಡಬೇಕೆಂದು ಒಂದು ಆದೇಶವಾಗಿದೆ. ನೀವು ಅದನ್ನು ಮಾಡಲಿಲ್ಲವೆಂದರೆ, 1956 ರಿಂದ ಇಲ್ಲಿಯವರೆಗೆ ಕರ್ನಾಟಕಕ್ಕೆ ಈಗಾಗಲೇ ಎರಡು ಕೋಟಿ ಜನ ಹೊರಗಡೆಯಿಂದ ಬಂದಿದ್ದಾರೆ. ಅದರಲ್ಲಿ ಒಂದೂವರೆ ಕೋಟಿ ಜನಕ್ಕೆ ಉದ್ಯೋಗ ಇದೆ. ಕನ್ನಡಿಗರಿಗೆ ಉದ್ಯೋಗ ಇಲ್ಲ. ನಿಮ್ಮ ಪ್ರಾಮಾಣಿಕತೆ ಬಗ್ಗೆ ನನಗೆ ನಂಬಿಕೆ ಇದೆ. ತಾವು ಸರೋಜಿನಿ ಮಹಿಷಿ ವರದಿಯನ್ನು ಪ್ರಾಮಾಣಿಕವಾಗಿ ಜಾರಿಗೆ ಬರುತ್ತದೆಯೇ ಎಂಬುದನ್ನು ತಾವು ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೇ, ಈ ಅಧಿವೇಶನ ಮುಗಿದ ನಂತರ ಕರ್ನಾಟಕದಲ್ಲಿರತಕ್ಕ ಕೈಗಾರಿಕೋದ್ಯಮಿಗಳನ್ನು ಕರೆದು ಬುದ್ಧಿವಾದ ಹೇಳತಕ್ಕಂಥಾದ್ದು ಅಷ್ಟೇ ಅಲ್ಲ, ಸ್ವಲ್ಪ ಸಮಯವನ್ನೂ

ಸಹಿತ ಕೊಡಬೇಕಾಗುತ್ತದೆ. ನಾನು ಕೊಡುತ್ತೇನೆ. ಈ ಮಧ್ಯದಲ್ಲಿ ಸರೋಜಿನಿ ಮಹಿಷಿ ವರದಿಯನ್ನು ಅನುಷ್ಠಾನ ಮಾಡಲಿಕ್ಕೆ ಕನ್ನಡ ಸಂಘದ ಪ್ರತಿನಿಧಿಗಳ, ಕನ್ನಡ ಪರವಾಗಿ ಹೋರಾಟ ಮಾಡುತ್ತಿರತಕ್ಕ ನಾಯಕರುಗಳ ಸಭೆಯನ್ನು ಕರೆದು ತಮ್ಮನ್ನೂ ಸೇರಿಸಿ. ಪಾಟೀಲ್ ಪುಟ್ಟಪ್ಪನವರನ್ನೂ ಸೇರಿಸಿ ಯಾವ ರೀತಿ ಅನುಷ್ಠಾನ ಮಾಡಬೇಕು. ಏನು ಮಾಡಬೇಕು ಎಂಬುದರ ಬಗ್ಗೆ ಅತ್ಯಂತ ಪ್ರಾಮಾಣಿಕವಾದ ಒಂದು ಟೈಮ್‌ಬಾಂಡ್ ಪ್ರೋಗ್ರಾಮ್ ಈ ತಿಂಗಳಲ್ಲಿ ಇದಾಗಬೇಕು, ಇನ್ನು ಆರು ತಿಂಗಳಲ್ಲಿ ಇದು ಆಗಬೇಕು. ಒಂದು ವರ್ಷದಲ್ಲಿ ಇದಾಗಬೇಕು ಎನ್ನತಕ್ಕಂಥ ಟೈಮ್ ಟೇಬಲ್ ಹಾಕಿಯೇ ಅನುಷ್ಠಾನಗೊಳಿಸಲಿಕ್ಕೆ ನಾನು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಗೋವಾದಲ್ಲಿರತಕ್ಕಂಥ ಕನ್ನಡಿಗರನ್ನು ಓಡಿಸುತ್ತಿದ್ದಾರೆ. ಎಲ್ಲಾ ರಾಜ್ಯದಲ್ಲಿ ಕನ್ನಡದ ಓಡಿಸುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ನಮ್ಮವರಿಗೆ ಕೆಲಸ ಇಲ್ಲ ಎನ್ನತಕ್ಕಂಥಾದ್ದು ಆಗಿದೆ. ನಿಮ್ಮ ಹೊಸ ಕೈಗಾರಿಕಾ ನೀತಿ ಏನಿರಬೇಕು. ಅದನ್ನು ನೀವು ಸ್ಪಷ್ಟಪಡಿಸಿ. ನೀವು ಸರೋಜಿನಿ ಮಹಿಷಿ ವರದಿಯನ್ನು ಓದಿ ಮಾಡತಕ್ಕಂಥಾದ್ದು ಈ ಸದನದಲ್ಲಿ ಒಂದು ನೀತಿ, ಅದಕ್ಕೊಂದು ಮಸೂದೆಯನ್ನು ನೀವು ತೆಗೆದುಕೊಂಡು ಬನ್ನಿ. ಕರ್ನಾಟಕದಲ್ಲಿ ನೂರಕ್ಕೆ ತೊಂಬತ್ತೊಂಭತ್ತು ಭಾಗ ಮಣ್ಣಿನ ಮಕ್ಕಳಿಗೇ ಕೆಲಸ ಎನ್ನತಕ್ಕಂಥ ನೀತಿಯನ್ನು ತಾವು ಮಾಡುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅ ್ರೇ, ಈಗಾಗಲೇ 2001–06ರಲ್ಲಿ ಮಾಡಿರತಕ್ಕ ನೀತಿ ಏನಿದೆ. ಅದನ್ನು ನಾನು ಓದುತ್ತೇನೆ. ಅದು ಇ ್ಲೀಷಿನಲ್ಲಿ ಇದೆ. ಕನ್ನಡದ ಕಾಪಿ ನನ್ನ ಹತ್ತಿರ ಇಲ್ಲರಿ.

ಶ್ರೀ ವಾಟಾಳ್ ನಾಗರಾಜ್ : ಅಲ್ಲೇ ಕಟ್ಟಿರುವುದು. ಕನ್ನಡಿಗರಿಗೇ ಉದ್ಯೋಗ ಎಂಬ ಕಾಯಿದೆಯೂ ಸಹ ಇಂಗ್ಲೀಷಿನಲ್ಲಿದೆ. ಇದನ್ನು ಎಷ್ಟರಮಟ್ಟಿಗೆ ಇವರು ಜಾರಿಗೆ ಕೊಡಬಹುದು ? ಅಧ್ಯಕ್ಷರೇ, ತಾವು ಹೇಳಿ. ತಾವು ಅನೇಕ ಸಾರಿ ಕನ್ನಡಿಗರ ಬಗ್ಗೆ ಮಾತನಾಡಿದ್ದಿರಿ. ದಯಮಾಡಿ ತಮಗೆ ಮೊರೆ ಕೊಡುತ್ತಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಗ್ರೂಪ್ ಸಿ ಅಂಡ್ ಡಿ ಹಂಡ್ರಡ್ ಪರ್ಸೆಂಟ್ ಕರ್ನಾಟಕದವರಿಗೇ, ಕನ್ನಡಿಗರಿಗೇ ಕೊಡಬೇಕೆಂಬುದು ಇದೆ, ಆದರೆ, ಇನ್ನೂ ನೂರಕ್ಕೆ ನೂರು ಕೊಡುವುದಕ್ಕಾಗಿಲ್ಲ. ಬಾಕಿ ಎಂಪ್ಲಾಯ್‌ಮೆಂಟ್ ಏನಿದೆ, ಅದರಲ್ಲಿ 80 ಭಾಗ ಕನ್ನಡಿಗರಿಗೆ ಕೊಡಬೇಕೆಂದು ಕೈಗಾರಿಕಾ ನೀತಯಲ್ಲಿ ಇದೆ. ಇದು 2001–06 ರಲ್ಲಿ ಮಾಡಿರತಕ್ಕ ಸರ್ಕಾರದ ನೀತಿ. ಆದರೂ ನಾನು ಪ್ರಾಮಾಣಿಕವಾಗಿ ಇದ್ದೇನೆ. ಸರೋಜಿನಿ ಮಹಿಷಿ ವರದಿ ಏನಿದೆ. ತಾವು ಏನು ಹೇಳಿದ್ದೀರಿ, ಅದನ್ನು ವಿಕೃತಗೊಳಿಸಿದ್ದಾರೆ. ಹೆಳವನನ್ನಾಗಿ ಮಾಡಿದ್ದಾರೆ ಎಂದು ತಾವು ಹೇಳಿರತಕ್ಕ ಅಂಶ ಏನಿದೆ, ಅದರಲ್ಲಿ ಸಾರಾಂಶ ಇದೆ. ಅದರಲ್ಲಿ ಒತ್ತು ಇದೆ. ನಾನು ಒಪ್ಪುತ್ತೇನೆ. ಅದಕ್ಕೋಸ್ಕರವೇ ನಾನು ಎಲ್ಲಾ ಮುಖಂಡರನ್ನು ಕರೆಸಿ, ಅಧಿವೇಶನದ ನಂತರ, ಇದಕ್ಕೋಸ್ಕರ ನಮ್ಮ ಅಧಿಕಾರಿಗಳನ್ನು ಕರೆಸಿ, ಒಂದು ಸಭೆ ಮಾಡಿ ಅದನ್ನು ಅನುಷ್ಠಾನಗೊಳಿಸಲಿಕ್ಕೆ ನಾನು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ. ಮಸೂದೆ ಅವಶ್ಯಕತೆ ಬಿದ್ದರೆ ಮಾಡೋಣ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮುಚ್ಚಿರತಕ್ಕ ಕಾರ್ಖಾನೆಗಳನ್ನು ಯಾವಾಗ ತೆಗೆಸುತ್ತೀರಿ, ನೀವು ನುಡಿದಂತೆ ನಡೆಯುತ್ತೀರಾ ? ಬಸವಣ್ಣನವರ ವಚನವನ್ನು ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಿ.

"ನುಡಿದರೆ ಮುತ್ತಿನ ಹಾರದಂತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು,
ನುಡಿದರೆ ಲಿಂಗ ಮೆಚ್ಚಿ ಹೌದು, ಹೌದು ಎನ್ನಬೇಕು.
ನುಡಿದಂತೆ ನಡೆಯದಿದ್ದರೆ ಕೂಡಲಸಂಗಮದೇವನೆಂತು ಮೆಚ್ಚುವನಯ್ಯ"

ಈ ನೀತಿಯನ್ನು ಅನುಸರಿಸಿಕೊಂಡು ಹೋಗಬೇಕು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಶಂಕರಲಿಂಗೇಗೌಡರು ಶತಾಬ್ದಿ ಎಕ್ಸ್‌ಪ್ರೆಸ್ ತರಹ ವಚನ ಹೇಳಿದರೆ, ಸದಸ್ಯರಿಗೆ ಅದು ಗೊತ್ತಾಗುವುದು ಹೇಗೆ ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ನಾನು ಮೊದಲಿನಿಂದಲೂ ಆಶುಭಾಷಣ ಮತ್ತು ಚರ್ಚಾ ಸ್ಪರ್ಧೆಯಿಂದಲೇ ಪ್ರಾರಂಭ ಮಾಡಿಕೊಂಡೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ನೀವು ನಿಜವಾದ ವಚನ ಹೇಳುತ್ತೀರೋ ಅಥವಾ ಚರ್ಚಾ ಹೇಳುತ್ತೀರೋ ಎಂಬ ಅನುಮಾನ ಶುರುವಾಗಿ ಬಿಟ್ಟಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಎಷ್ಟು ದಿವಸದಲ್ಲಿ ಕಾರ್ಖಾನೆ ತೆಗೆಯುತ್ತಾರೆ ಎಂಬ ಬಗ್ಗೆ ದಯಮಾಡಿ ಉತ್ತರ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸದಸ್ಯರ ಸಂಶಯವನ್ನು ನಾವು ತೆಗೆದುಕೊಂಡಿದ್ದೇವೆ.

ರಾಜ್ಯದಲ್ಲಿ ರೇಷ್ಮೆ ನೂಲು ಬಿಚ್ಚುವ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸುವುದು

56(329) ಶ್ರೀ ಜಿ.ವಿ. ಶ್ರೀರಾಮರೆಡ್ಡಿ.(ಬಾಗೇಪಲ್ಲಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ರೇಷ್ಮೆ ನೂಲು ಬಿಚ್ಚುವ ಕಾರ್ಖಾನೆಗಳು ನಷ್ಟದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಅವುಗಳಲ್ಲಿ ನಷ್ಟವನ್ನು ಕಡಿಮೆ ಮಾಡುವ ಸಲುವಾಗಿ ಐದು ಕಾರ್ಖಾನೆಗಳನ್ನು ವಿಲೀನಗೊಳಿಸಿ, ಎರಡು ಘಟಕಗಳಾಗಿ ಈ ಕೆಳಗಿನಂತೆ ಪರಿವರ್ತಿಸಲು ಉದ್ದೇಶಿಸಿದೆ.

- ಕೊಳ್ಳೇಗಾಲದ ಸರ್ಕಾರಿ ರೇಷ್ಮೆ ಕಾರ್ಖಾನೆಗಳನ್ನು ಮಾಂಬಳ್ಳಿ ಸರ್ಕಾರಿ ರೇಷ್ಮೆ ಕಾರ್ಖಾನೆಯೊಂದಿಗೆ.
- ಚಾಮರಾಜನಗರದ ಸರ್ಕಾರಿ ರೇಷ್ಮೆ ಕಾರ್ಖಾನೆಯನ್ನು ಸಂತೆಮರಳ್ಳಿ ಸರ್ಕಾರಿ ರೇಷ್ಮೆ ಕಾರ್ಖಾನೆಯೊಂದಿಗೆ
- ಸರ್ಕಾರಿ ರೇಷ್ಮೆ ಹುರಿ ಮತ್ತು ನೇಯ್ಗೆ ಕಾರ್ಖಾನೆ, ಮುಡಿಗುಂಡಂ, ಇದರ ಸಿಬ್ಬಂದಿ/ ಕಾರ್ಮಿಕರನ್ನು ಮಾಂಬಳ್ಳಿ ಮತ್ತು ಸಂತೆಮರಳ್ಳಿ ಕಾರ್ಖಾನೆಗಳಿಗೆ ಹಂಚಿಕೆ ಮಾಡುವುದು.

ಈ ನಾಲ್ಕೂ ಕಾರ್ಖಾನೆಗಳು ಅವುಗಳ ಸಾಮರ್ಥ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿನ ಯಂತ್ರೋಪಕರಣಗಳನ್ನು ಹಾಗೂ ಕಾರ್ಮಿಕರನ್ನು